# ಶಿಥಿಲಗೊಳ್ಳುತ್ತಿರುವ ಸಂಬಂಧಗಳು

'ಒಬ್ಬನುಣುವೂಟದಲಿ ಸವಿಯಿಲ್ಲ, ಸೊಗವಿಲ್ಲ' ಎನ್ನುತ್ತಾನೆ ಡಿ.ವಿ.ಜಿ.ಯವರ ಮಂಕುತಿಮ್ಮ. ಈ ಮಾತು ಮನುಷ್ಯನಿಗೆ ಮಾತ್ರ ಸೀಮಿತವಲ್ಲ. ಹಲವು ಪ್ರಾಣಿ ಪಕ್ಷಿಗಳಲ್ಲಿ– ಕೆಲವು ಕೀಟಗಳಲ್ಲಿ ಕೂಡ– ಆಹಾರವನ್ನು ಗುಂಪಿನಲ್ಲಿ ಹಂಚಿಕೊಂಡು ತಿನ್ನುವ ಅಭ್ಯಾಸವಿದೆ. ಈ ಎಲ್ಲ ಜೀವಿಗಳಿಗಿಂತ ಮನುಷ್ಯ ಹೆಚ್ಚು ಸಂವೇದನಾಶೀಲ. ಆದ್ದರಿಂದಲೇ ಆತ ಸಮುದಾಯ ಪ್ರೀತಿಯನ್ನು ಬೆಳೆಸಿಕೊಂಡು, ಸಮಾಜ ಜೀವಿಯಾಗಿರುವುದು; ಕೂಡಿ ಉಣ್ಣುವ, ಕೂಡಿ ಬಾಳುವ ಪ್ರಕ್ರಿಯೆಯೆಂಬುದು ಪ್ರೀತಿ, ವಾತ್ಸಲ್ಯ, ಮಮತೆ, ಕರುಣೆ ಮುಂತಾದ ಮಾನವೀಯ ಭಾವನೆಗಳ ಅಭಿವ್ಯಕ್ತಿ. ಹಾಗೆ ನೋಡಿದರೆ ನಮ್ಮಲ್ಲಿನ ಪ್ರಾಚೀನ ಪರಿಕಲ್ಪನೆಯ ಹಿಂದಿರುವುದೇ ಈ ಹಂಚಿ ಉಣ್ಣುವ ತತ್ತ್ವ. ವ್ಯಕ್ತಿ ಜೀವನದ ಸಂತೋಷ, ಸಮಷ್ಟಿಯ ಸಾನ್ನಿಧ್ಯದಲ್ಲಿ ವೃದ್ಧಿಯಾಗುತ್ತದೆ; ವ್ಯಕ್ತಿಯೊಬ್ಬನ ದುಃಖ, ಸಮಷ್ಟಿಯ ಸಹಾನುಭೂತಿಯಿಂದಾಗಿ ಸಹ್ಯವಾಗುತ್ತದೆ. ಈ ಅರಿವು ಮನುಷ್ಯನಿಗಿದ್ದುದರಿಂದಲೇ ಆತ ಸಂಸಾರಿಯಾದ; ಸಮಾಜವನ್ನು ರೂಪಿಸಿಕೊಂಡ; ತಂದೆ–ತಾಯಿ, ಗಂಡ–ಹೆಂಡತಿ, ಅಣ್ಣ–ತಮ್ಮ, ಅಕ್ಕ–ತಂಗಿ– ಈ ರೀತಿಯ ಬಾಂಧವ್ಯದ ಭಾವನೆಗಳನ್ನು ಗಟ್ಟಿಮಾಡಿಕೊಂಡ; ಜೀವ ಜೀವಗಳ ನಡುವೆ ಪ್ರೀತಿ, ವಾತ್ಸಲ್ಯ, ಸ್ನೇಹ, ವಿಶ್ವಾಸ– ಇತ್ಯಾದಿ ಸ್ನಿಗ್ಧ ಭಾವಗಳಿದ್ದಾಗ ಜೀವನದ ಸೊಬಗು, ಸ್ವಾರಸ್ಯ ಹೆಚ್ಚಾಗುತ್ತದೆ ಎಂಬುದನ್ನು ಅನುಭವದಿಂದ ಅರಿತುಕೊಂಡ.

ಇಂಥ ಕೌಟುಂಬಿಕ ಸಂಬಂಧಗಳು ಗಟ್ಟಿಗೊಳ್ಳುವುದಕ್ಕೆ ಭಾವನಾತ್ಮಕ ಪ್ರೇರಣೆಗಳ ಜೊತೆಗೆ ಲೌಕಿಕವೆನ್ನಿಸುವ ಕಾರಣಗಳೂ ಇವೆ ಎನ್ನುವುದು ಸುಳ್ಳಲ್ಲ. ಮನುಷ್ಯ ಬದುಕಿಗಾಗಿ ಅವಲಂಬಿಸುವ ಅನೇಕ ಉದ್ಯೋಗಗಳಿಗೆ ಹಲವಾರು ಮಂದಿಯ ಸಹಕಾರದ ಅಗತ್ಯವಿದೆ. ಉದಾಹರಣೆಗೆ ವ್ಯವಸಾಯ, ನೇಕಾರಿಕೆ, ಕುಂಬಾರಿಕೆ– ಇಂಥ ವೃತ್ತಿಗಳನ್ನು ಅವಲಂಬಿಸಿ ಬದುಕುವವರು ಇತರರ ನೆರವನ್ನು ಪಡೆಯಬೇಕಾದುದು ಅನಿವಾರ್ಯ. ಹೀಗಾಗಿ, ಕುಟುಂಬದ ಸದಸ್ಯರೆಲ್ಲರೂ ಒಟ್ಟು ಕುಟುಂಬದ ನಿರ್ವಹಣೆಗಾಗಿ ತಮ್ಮ ತಮ್ಮ ಮಿತಿಯಲ್ಲಿ ಸಹಕರಿಸಿ, ದುಡಿಯಲೇಬೇಕಾಗಿತ್ತು. ಈ ದೈಹಿಕ ದುಡಿಮೆ ಕುಟುಂಬದ ಸದಸ್ಯರ ಮನಸ್ಸನ್ನು ಸಂಸ್ಕರಿಸಿ, ಅವರಲ್ಲಿ ಪರಸ್ಪರ ಅನುಬಂಧೀ ಭಾವ ವರ್ಧಿಸಲು ಕಾರಣವಾಗುತ್ತಿತ್ತು. ಆದ್ದರಿಂದಲೇ, ಮೊನ್ನೆ ನಿನ್ನೆಯವರೆಗೂ ನಮ್ಮಲ್ಲಿ ಕೂಡು ಕುಟುಂಬಗಳು ಅಸ್ತಿತ್ವದಲ್ಲಿದ್ದವು. ಒಂದೇ ಸೂರಿನಡಿ, ಎರಡು ಮೂರು ತಲೆಮಾರುಗಳಿಗೆ ಸೇರಿದ ಮಂದಿ ಪರಸ್ಪರ ಸಹಕರಿಸುತ್ತಾ ಜೀವನ ನಡೆಸುತ್ತಿದ್ದರು. ಕುಟುಂಬದಲ್ಲಿನ ವ್ಯಕ್ತಿಯೊಬ್ಬನ ಸುಖ ದುಃಖಗಳು ಇಡಿಯ ಕುಟುಂಬದ ಸುಖ ದುಃಖಗಳಾಗಿ ಹಂಚಿ ಹೋಗುತ್ತಿದ್ದವು. ಅಂಥ ಪರಿಸರದಲ್ಲಿ ಬೆಳೆದ ಮಕ್ಕಳು ಸಹಕಾರ, ಸಹಭಾಗಿತ್ವ, ಸಹಿಷ್ಣುತೆ, ಅನುಕಂಪ– ಮುಂತಾದ ಗುಣಗಳನ್ನು ರೂಢಿಸಿಕೊಂಡು ಬೆಳೆಯಲು ಅವಕಾಶವಾಗುತ್ತಿತ್ತು.

ಆದರೀಗ ಕಾಲ ಬದಲಾಗಿದೆ. ಹೊಸ ಜಗತ್ತಿನ ಉದ್ಯೋಗಾವಕಾಶಗಳ ಸಮೃದ್ಧಿಯಿಂದಾಗಿ, ಕೂಡು ಕುಟುಂಬಗಳು ವಿಘಟಿತಗೊಳ್ಳುತ್ತಿವೆ. ವ್ಯಕ್ತಿ ವ್ಯಕ್ತಿಗಳು ಆರ್ಥಿಕ ಪ್ರಗತಿಯತ್ತಲೇ ಮುಖ ಮಾಡಿರುವುದರಿಂದ, ಮನುಷ್ಯ ಸಂಬಂಧಗಳಲ್ಲಿನ 'ಜೀವ ಬಾಂಧವ್ಯ' ಮರೆಯಾಗುತ್ತಿದೆ. ವ್ಯಾವಹಾರಿಕ ಜಗತ್ತಿನಲ್ಲಿ ಹೃದಯ ಹಿಂದೆ ಸರಿದು, ಬುದ್ಧಿಯ ಕೈ ಮೇಲಾಗುತ್ತಿದೆ. ಬಹು ಸದಸ್ಯರು ಇರುತ್ತಿದ್ದ ಸಂಸಾರ ಇಬ್ಬರು, ತಪ್ಪಿದರೆ ಮೂವರಿರುವ ಸಂಸಾರಗಳಾಗಿ ಒಡೆಯುತ್ತಿವೆ. ಪರಿಣಾಮವಾಗಿ ಕೂಡು ಕುಟುಂಬಗಳಲ್ಲಿ ಅನಿವಾರ್ಯವಾಗಿದ್ದ ಸಹಕಾರ ಮನೋಧರ್ಮ, ಸಹಭಾಗಿತ್ವ ಗುಣಗಳು ನಶಿಸುತ್ತಿವೆ. ಬಂಧುಗಳಲ್ಲಿರಬೇಕಾದ ಪ್ರೀತಿ, ವಿಶ್ವಾಸ, ಮಮತೆ, ವಾತ್ಸಲ್ಯ ಮುಂತಾದವುಗಳೂ ಕಾಣೆಯಾಗುತ್ತಿವೆ. ಬಂಧುಗಳು ಯಾವುದಾದರೊಂದು ಸಂದರ್ಭದಲ್ಲಿ ಸಂಧಿಸಿದಾಗಲೂ, ಅವರಲ್ಲಿನ ಭಾವಾರ್ದ್ರತೆಯ ಅನುಪಸ್ಥಿತಿಯಿಂದಾಗಿ ಅವರ ಸಂಭಾಷಣೆ 'ಶುಷ್ಕ ವ್ಯಾವಹಾರಿಕ' ಮಟ್ಟದಲ್ಲಿರುತ್ತದೆಯೇ ಹೊರತು ಮುಕ್ತ 'ಹೃದಯ ಸಂವಾದ'ವಾಗುವುದಿಲ್ಲ. ಅವರ ಭೇಟಿ ಮೇಲ್ಪದರದ 'Touch and go' ಪ್ರಕ್ರಿಯೆಗಷ್ಟೇ ಸೀಮಿತಗೊಳ್ಳುತ್ತದೆ.

'ಸಂಬಂಧ' ಎಂಬ ಪದದಲ್ಲಿಯೇ 'ಬಂಧ' ಎಂಬುದಿದೆಯಷ್ಟೆ? 'ಬಂಧ' ಎಂದರೆ 'ಬಿಗಿಯಾಗಿ ಸೇರಿರುವುದು' ಎಂದರ್ಥ. ಈ ಕಾಲ ಘಟ್ಟದಲ್ಲಿ ಸಂಬಂಧಗಳಲ್ಲಿ ಸ್ನಿಗ್ಧ ಭಾವಗಳ ಅಂಟು ಕಾಣೆಯಾಗಿ 'ಬಂಧ' ಸಡಿಲಗೊಳ್ಳುತ್ತಿದೆ. ನಾವು ಹೆಚ್ಚು ಹೆಚ್ಚು ಪ್ರಗತಿಗೊಳ್ಳುವ ಆತುರದಲ್ಲಿ ಬದುಕಿನ ಚೆಲುವನ್ನು ಕಳೆದುಕೊಂಡು ನಿಧಾನವಾಗಿ ಭಾವಶೂನ್ಯರಾಗುತ್ತಿದ್ದೇವೆ!

■ ವೈನತೇಯ

## ಮಾತೇ ಮುತ್ತು

★ ಅತ್ಯಂತ ಮಲಿನವಾದ ಕಾರ್ಯದ ವಿಷಯದಲ್ಲಿ ದುಷ್ಟರ ಬುದ್ಧಿಗೆ ಜಾಣ್ಮೆ ಬರುತ್ತದೆ. ಗೂಗೆಗಳ ಕಣ್ಣಿಗೆ ಕತ್ತಲಲ್ಲಿಯೇ ರೂಪವನ್ನು ನೋಡುವ ಶಕ್ತಿ ಇರುತ್ತದೆ.

–ವಾಸದತ್ತಾ

★ ನನ್ನಲ್ಲಿ ಯಾವ ತಪ್ಪೂ ಇಲ್ಲ ಎಂಬುದೇ ವಿಶ್ವಾಸಕ್ಕೆ ಕಾರಣವಾಗುವುದಿಲ್ಲ. ಗುಣಶಾಲಿಗಳಿಗೂ ಕೂಡ ನಿರ್ದಯರಾದ ದುರ್ಜನರಿಂದ ಭಯವಿದ್ದೇ ಇದೆ.

–ಹಿತೋಪದೇಶ

★ ಕಬ್ಬಿನ ಜಲ್ಲೆಯ ತುದಿಯಿಂದ ಗೆಣ್ಣು ಗೆಣ್ಣಿಗೂ ಹೇಗೆ ರುಚಿ ಹೆಚ್ಚುವುದೋ ಹಾಗೇ ಸತ್ಪುರುಷರ ಸ್ನೇಹವು ದಿನ ಕಳೆದಂತೆಲ್ಲಾ ಮಧುರವಾಗುವುದು. ಆದರೆ ದುರ್ಜನರ ಸ್ನೇಹವು ಇದೇ ರೀತಿ ಕೆಡುತ್ತಾ ಹೋಗುತ್ತದೆ.

–ಸುಭಾಷಿತ

★ ತಂದೆಯ ಮನಸಿನಲ್ಲಿರುವುದನ್ನರಿತು ಮಾಡತಕ್ಕ ಮಗನು ಉತ್ತಮ. ಹೇಳಿದ್ದನ್ನು ಮಾಡತಕ್ಕವನು ಮಧ್ಯಮ. ಅಶ್ರದ್ಧೆಯಿಂದ ಮಾಡತಕ್ಕವನು ಅಧಮ. ಮಾತನ್ನು ಸರ್ವಥಾ ನಡೆಸದೆ ಇರತಕ್ಕವನು ತಂದೆಯ ಮಲವಿದ್ದಂತೆ.

–ಭಾಗವತ

★ ಚೆನ್ನಾಗಿ ಕಲಿತಿರುವ ಉತ್ತಮ ವಿದ್ಯೆಯಾದರೂ ದುಷ್ಟನಲ್ಲಿದ್ದರೆ, ಹಾವಿನ ಹೆಡೆಯಲ್ಲಿರುವ ರತ್ನದಂತೆ ಜನರ ಶೋಕಕ್ಕೆ ಕಾರಣವಾಗುತ್ತದೆ.

–ಹರಿಹರ ಸುಭಾಷಿತ

★ ಬರುವುದೇನುಂಟೊಮ್ಮೆ ಬರುವ ಕಾಲಕೆ ಬಹುದು.

–ಮಧುರಚೆನ್ನ

★ ಸ್ವಂತಿಕೆ ಮತ್ತು ಸ್ಪಷ್ಟ ನಿಲುವು ಇಲ್ಲದ ವ್ಯಕ್ತಿಗಳು ಸಮಾಜಕ್ಕೆ ಯಾವಾಗಲೂ ನಿಷ್ಪ್ರಯೋಜಕರು.

–ಅನುಭವಾಮೃತ

★ ಕೆಟ್ಟದ್ದೆಂದು ಗೊತ್ತಾಗಿರುವ ವಿಚಾರಕ್ಕಿಂತ ಒಳಿತಿರಬಹುದಾದ ಸಂಗತಿಯನ್ನು ನಾನು ಯಾವಾಗಲೂ ಸ್ವಾಗತಿಸುತ್ತೇನೆ.

–ಸಾಕ್ರೆಟಿಸ್

★ ಪ್ರಕಟವಾಗದ ಒಂದು ಒಳ್ಳೆಯ ಕೆಲಸ, ಆಗಬಹುದಾದಂಥ ಸಾವಿರ ಒಳ್ಳೆಯ ಕೆಲಸಗಳನ್ನು ಕೊಲ್ಲುತ್ತದೆ.

–ಶೇಕ್ಸ್‌ಪಿಯರ್

★ ಎಲ್ಲರಿಗೂ ಕಾಣಲೆಂದು ಮಾಡುವ ಒಳ್ಳೆಯದು ನಿಜವಾಗಿ ಒಳ್ಳೆಯದಲ್ಲ; ಯಾರಿಗಾದರೂ ಕಂಡೀತೆಂಬ ಭಯದಿಂದ ಮಾಡಿದುದು ಮಾತ್ರ ಕೆಟ್ಟದ್ದು.

–ಚೀನಾ ಗಾದೆ

★ ಕೆಟ್ಟದ್ದನ್ನು ತಡೆಯಲಾರೆಯಾ? ಹಾಗಾದರೆ ಒಳ್ಳೆಯದನ್ನು ನೋಡಲು ನೀನು ಇರಲಾರೆ.

–ಯಹೂದಿ ಗಾದೆ

★ ಒಳ್ಳೆಯದನ್ನು ನೋಡಿ ಮೈಮರೆಯಬೇಡ, ಕೆಟ್ಟದ್ದನ್ನು ನೋಡಿ ಕಂಗಾಲಾಗಬೇಡ.

–ಫಿನ್ಲೆಂಡ್ ಗಾದೆ

★ ಅಭ್ಯಾಸವಾದರೆ ಒಳ್ಳೆಯನಾಗಿರುವುದು ಕೆಟ್ಟವನಾಗಿರುವುದಕ್ಕಿಂತ ಸುಲಭ ಹಾಗೂ ಹೆಚ್ಚು ಸಂತೋಷಕರ.

–ಇಂಗ್ಲಿಷ್ ಗಾದೆ

★ ಸ್ವಪ್ರಯೋಜನವನ್ನು ತ್ಯಾಗ ಮಾಡಿ ಇತರರಿಗೆ ಪ್ರಯೋಜನ ಉಂಟು ಮಾಡುವವರು ಸತ್ಪುರುಷರು. ಸ್ವಪ್ರಯೋಜನಕ್ಕೆ ವಿರೋಧವಾಗದಂತೆ ಇತರರ ಪ್ರಯೋಜನಕ್ಕೆ ಯತ್ನಿಸುವವರು ಸಾಮಾನ್ಯರು. ತಮ್ಮ ಲಾಭಕ್ಕಾಗಿ ಪರಹಿತ ನಾಶ ಮಾಡುವವರು ರಾಕ್ಷಸರು.

–ಭರ್ತೃಹರಿ